ನಡೆಸಿದ್ದೂ ಇತ್ತು. ಖತೀಜಾಳ ಸಾಧಾರಣ ರೂಪಕ್ಕಿಂತ ಅತಿ ಕಳಪೆಯಾದ ಆರ್ಥಿಕ ಹಿನ್ನೆಲೆಗೆ ಗಂಡು ಸಿಗಲಿಲ್ಲ. ಯಾವುದೋ ಹಂತದಲ್ಲಿ ಮಗಳಿಗಿನ್ನು ವಯಸ್ಸಾಯಿತು. ನಾವು ಬದುಕಿರುವವರೆಗೆ ನಮ್ಮ ಜೊತೆ ನಮ್ಮ ದೇಖರೇಖಿಯಲ್ಲಿರುತ್ತಾಳೆ. ಆಮೇಲೆ ಅಲ್ಲಾಹುವಿನ ಇಚ್ಛೆ ಎಂದು ತಣ್ಣಗಾದಳು ಫಾತುಮ್ಮ. ಮಗಳು ದೊಡ್ಡವಳಾದಮೇಲೆ ಫಾತುಮ್ಮ ತನ್ನ ಹಾಸಿಗೆಯನ್ನು ಹಜಾರದಲ್ಲಿ ಹಾಕಿ ಮಗಳೊಟ್ಟಿಗೆ ಮಲಗಲು ಶುರುಮಾಡಿದಳು. ಮದುವೆಯಿಲ್ಲದ ವಯಸ್ಸಿನ ಮಗಳ ಮುಂದೆ ತಾನು ಗಂಡನೊಡನೆ ಕೋಣೆಯಲ್ಲಿ ಮಲಗಲು ಅವಳಿಗೆ ಮನಸ್ಸೇ ಬರುತ್ತಿರಲಿಲ್ಲ. ಈ ಕುರಿತು ಗಂಡಹೆಂಡಿರ ನಡುವೆ ಜಗಳಗಳಾಗಿದ್ದೂ ಇದೆ.

ಮೂರು ಜನ ರಟ್ಟೆ ಮುರಿಯ ದುಡಿದರೂ ಎರಡು ಹೊತ್ತಿನ ಕೂಳಿಗೂ ಎಟುಕದೆ ಭಂಗ–ಬವಣೆಯ ಬದುಕೊಂದನ್ನು ದೂಡುತ್ತಿದ್ದ ಆ ಕುಟುಂಬ ಅನಿರೀಕ್ಷಿತ ಹೊಡೆತಕ್ಕೊಳಗಾಯಿತು. ಏನೇ ಆದರೂ ತನ್ನ ಜೊತೆಗೊಬ್ಬನಿದ್ದಾನೆ, ಗಂಡುದಿಕ್ಕಾಗಿ ಮನೆಯನ್ನು ನಿಭಾಯಿಸುತ್ತಾನೆ ಎಂದುಕೊಂಡಿದ್ದ ಧೈರ್ಯ ಉಡುಗಿ ಹೋಗುವಂತೆ ಸೈಯದ್ ಅಮೀರ ಸತ್ತ. ಕತ್ತಾಳೆ ತರಲೆಂದು ಹೋಗಿದ್ದ ಫಾತುಮ್ಮಳ ಗಂಡ ಅಮೀರ್‌ಹಸನ್ ಹಾವು ಕಚ್ಚಿ ಸತ್ತ. ಅನಂತರದ ದಿನಗಳಲ್ಲಿ ಇನ್ನೂ ಕಷ್ಟಕ್ಕೆ ಸಿಲುಕಿದವರು ತಾಯಿ ಮಗಳಿಬ್ಬರು. ಫಾತುಮ್ಮ ಆಗೆಲ್ಲ ಅಂದುಕೊಳ್ಳುತ್ತಿದ್ದಿದ್ದು... ಸದ್ಯ ಒಂದೇ ಮಗುವಿದೆ. ಇದಕ್ಕೋಸ್ಕರವೇ ಅಲ್ಲಾಹು ನನ್ನ ಮೊದಲ ಹೆರಿಗೆಯಲ್ಲೇ ನಂಜಾಗಿ ಗರ್ಭಕೋಶ ತೆಗೆದು ಹಾಕುವಂತೆ ಮಾಡಿದನೇನೋ ಎಂದು! ಎಷ್ಟೇ ದುಃಖವಾದರೂ ಆತ್ಮಬಲ ಕಳೆದುಕೊಳ್ಳದ ಮಗಳ ಜೊತೆ ಬದುಕು ಕಟ್ಟಿಕೊಳ್ಳತೊಡಗಿದಳು ಫಾತುಮ್ಮ.

ಇಲಿಯಾಸ ಎರಡನೇ ಬಾರಿ ಆ ಮನೆಗೆ ಮೀಟರ್ ರೀಡಿಂಗ್‌ಗಾಗಿ ಬಂದಾಗ ತಾಯಿ ಮಗಳಿಬ್ಬರೂ ತಯಾರಾಗಿ ನರಸೀಪುರದ ಸಂತೆಗೆ ಹೊರಟಿದ್ದರು. ಜಾತ್ಯಾಭಿಮಾನದಿಂದ ಮಾತಾಡಿದವರನ್ನು ತಾನೂ ಮಾತಾಡಿಸಿ, ನರಸೀಪುರಕ್ಕೆ ಹೊರಟ್ರ? ಎಂದ. ಅಷ್ಟರಲ್ಲಾಗಲೇ ಇವರ ಕುಟುಂಬದ ವಿಚಾರ ಅವನ ಕಿವಿಗೂ ಅಷ್ಟಿಷ್ಟು ಬಿದ್ದಿತ್ತು.

'ಹೌದು' ಎಂದಾಗ 'ಸ್ವಲ್ಪ ಹೊತ್ತು ಕಾದ್ರೆ ನಂದು ಆಟೋಲೇ ಹೋಗಬೋದು ಬಾಗ್ವಾಳಿನ ಮೀಟರ್ರೀಡಿಂಗ್ ಮುಗಿಸಿ ಹೋಗ್ತೀನಿ. ಇನ್ನೊಂದು ಮುಕ್ಕಾಲು ಗಂಟೆಗೆ ಎಲ್ಲ ಆಗಿಬಿಡುತ್ತೆ' ಎಂದ.

ಇಲಿಯಾಸ್ ಹೆಚ್ಚೇನೂ ಹೊತ್ತು ಮಾಡಲಿಲ್ಲ. ಅವರು ಬಂದ ಹದಿನೈದು ನಿಮಿಷಕ್ಕೆ ಅಲ್ಲಿಗೆ ಆಟೋ ತಂದ. ತಾಯಿ ತಾನು ಮಧ್ಯ ಕೂತು ಮಗಳನ್ನು ಅಂಚಿಗೆ ಕೂರಿಸಿಕೊಂಡಳು. ಆಗ ಅವಳೊಮ್ಮೆ ಅವನ ಮುಖ ನೋಡಿದ್ದರೆ ಅವನಿಗಾದ ನಿರಾಶೆಯ ಗುರುತಾಗುತ್ತಿತ್ತು!

ಹೀಗೆ ಹೋಗಿ ಬಂದು ಮಾಡುತ್ತಾ, ಆಗಾಗ ಆ ಮನೆಗೆ ಮೀನು, ಕೋಳಿ, ಸಂಬಾರ ಪದಾರ್ಥಗಳು, ತರಕಾರಿಗಳು ಬೆಣ್ಣೆ ಎಲ್ಲವೂ ಸರಬರಾಜು ಮಾಡುತ್ತಾ ಬಂದ. ಅಷ್ಟರಲ್ಲಿ ಅವನ ಮೇಲೆ ವಿಶ್ವಾಸವೂ ಬೆಳೆದಿತ್ತು. ಇವರ ಮನೆಯಲ್ಲಿ ತಯಾರಾದ ತಿಂಡಿ ತಿನಿಸುಗಳು ಅವನಿಗೂ ತಲುಪ ಹತ್ತಿದವು. ಭಾನುವಾರಗಳಲ್ಲಿ ಇವರ ಮನೆಗೆ ಊಟಕ್ಕೆ ಬರುವುದೂ. ಅವನಿಗಾಗಿ ಅವರು ವಿಶೇಷ ಅಡುಗೆ ಮಾಡುವುದು ಮಾಮೂಲಾಯಿತು. ಅಕ್ಕಪಕ್ಕದವರು ಹುಬ್ಬೇರಿಸಿ ಮಾತಾನಾಡಿದ ಒಡಕು ಮಾತುಗಳು ಫಾತುಮ್ಮಳ ಕಿವಿಗೂ ಅಷ್ಟಿಷ್ಟು ಬಿದ್ದವು. ತಾಯಿಮಗಳಿಬ್ಬರ ಏಕತಾನತೆಯ ಬಡತನದ ಬದುಕಿನಲ್ಲಿ ಇಲಿಯಾಸನ ಓಡಾಟ ಬೇಸಿಗೆಯಲ್ಲಿ ತಂಗಾಳಿ ಬೀಸಿದಷ್ಟು ಹಿತವಾಗಿತ್ತು.

ಒಂದು ರಮ್‌ಜಾನಿನ ತಿಂಗಳು... ಇಲಿಯಾಸ ಒಂದಿಷ್ಟು ಹಣ್ಣು ಹಂಪಲುಗಳನ್ನು, ಖತೀಜಾಳಿಗೂ ಫಾತುಮ್ಮಳಿಗೂ ಸೀರೆಗಳನ್ನು ತಂದು ಹಜಾರದ ನಾಗಾಲಿಯ ಮೇಲಿರಿಸಿ, 'ಒಂದ್ಲೋಟ ನೀರು ಕೊಡು ಖತೀಜಾ' ಎಂದ. ಮನೆಯಲ್ಲಿದ್ದ ಕಾರಣ ಅವಳು ಹಿಜಾಬ್ ಧರಿಸಿರಲಿಲ್ಲ. ಸಾಧಾರಣ ಸೆಲ್ವಾರು ತೊಟ್ಟು ಬಿಗಿಯಾಗಿ ಜಡೆ ಹೆಣೆದುಕೊಂಡಿದ್ದಳು. ನೀರಿನ ಗ್ಲಾಸನ್ನು ಕೊಡುವಾಗ ಅವನ ಕೈ ಅವಳ ಬೆರಳುಗಳನ್ನು ಬೇಕೆಂದೇ ತುಸು ಹೆಚ್ಚು ಹೊತ್ತು ಸೋಕಿತೆನಿಸಿತವಳಿಗೆ. ಮುಖದಲ್ಲಿ ಯಾವ ಭಾವನೆ ತೋರಗೊಡದೇ ಕೈ ಹಿಂತೆಗೆದುಕೊಂಡಿದ್ದಳು. 'ಇದು ತಗೊಳ್ಳಿ ನೀವಿಬ್ಬರು ಹಬ್ಬಕ್ಕೆ ಉಟ್ಟುಕೊಳ್ಳಿ' ಎಂದವನನ್ನು ಅಚ್ಚರಿಯಿಂದ ನೋಡುತ್ತಾ ಫಾತುಮ್ಮ, 'ಇದೆಲ್ಲ ಏನು' ಎಂದಳು.